## ಗಜಲ್‌ಗಳು



**ಸ.ರಘುನಾಥ**
ಕಲೆ: ವಿಶ್ವನಾಥ್ ಎ.ಎಸ್.



# ತೋರಿಸುವ

ಕ್ರಾಂತಿ ಕನ್ನೆಯ ಎದೆಗೆ ನನ್ನ ಕನ್ನೆಯ ಒಲವ ತೋರಿಸುವೆ
ನನ್ನ ಕನ್ನೆಯ ಮತಿಗೆ ಕ್ರಾಂತಿ ಕನ್ನೆಯ ಚೆಲುವ ತೋರಿಸುವೆ

ಕ್ರಾಂತಿ ಕನ್ನೆಯ ಅಂತರಂಗದ ಜನಗಣದ ಬಾಳಗೀತೆಯ
ನನ್ನ ಕನ್ನೆಯ ದನಿಯಲ್ಲಿ ಕ್ರಾಂತಿಯ ಬಲವ ತೋರಿಸುವೆ

ದೀನ ಬದುಕುಗಳ ಕಣ್ಣೀರ ತೊಡೆವ ಕ್ರಾಂತಿ ಕನ್ನೆಯ ಸೆರೆ
ಹಿಡಿಯೆ ಬರುವವರ ಅಟ್ಟಟ್ಟಿ ಹಿಡಿವ ಜಾಲವ ತೋರಿಸುವೆ

ಸಮರ ನೆತ್ತರ ತೊಳೆವ ಕರುಣೆ ನದಿಗಳ ಎದೆಯಲಿಟ್ಟವರ
ಜೊತೆಗೂಡಿ ಶಾಂತಿ ಬಿತ್ತಿ ಬೆಳೆವ ಫಲವತ್ತು ಹೊಲವ ತೋರಿಸುವೆ



# ಹೋದವ ಬಾರದೆ ವಿರಹವು ನೀಗದು

ಚಂದಿರ ಮೂಡುವ ಹೊತ್ತಿಗೆ ಬರುವವ ಬಾರದೆ ಹೋದ
ಕಣ್ಣಿಗೆ ನಿದಿರೆಯು ಹಾಯದು ಹೋದವ ಬಾರದೆ ಹೋದ

ಸಮಯವು ನಡಿಗೆಯ ಮರೆದುದು ಹಾಡಿಗೆ ವಿರಹವು ನೀಗದು
ಕಣ್ಣಿಗೆ ದಾರಿಯೆ ಕಾಂಬುದು ಹೋದವ ಬಾರದೆ ಹೋದ

ಮುಡಿಯದ ಮಾಲೆಯ ಹೂಹೂ ಎಣಿಸಲು ಮುಗಿಯದು
ಇರುಳು
ನೇಸರನೇತಕೆ ಬೇಗನೆ ಬಾರನೊ ಹೋದವ ಬಾರದೆ ಹೋದ

ಯಾವುದೊ ಸೀಮೆಗೆ ನೆತ್ತಿಯ ಮೇಲೆಯೆ ವಿಮಾನ ಹಾರಿತು
ಆಗಲೆ ರಯಿಲೂ ಹೋಯಿತು ಹೋದವ ಬಾರದೆ ಹೋದ

'ಭಾಮೆಯ ನೋಡಲು ತಾ ಬಂದ ಬೃಂದಾವನದಿಂದ...'
ಬರುವುದು ಖಂಡಿತ ಎನುತಲೆ ಹೋದವ ಬಾರದೆ ಹೋದ.